**ಗೋಡೆಪತ್ರಿಕೆ: ಕಲಿಕೆಗೆ ತರಗತಿಕೋಣೆಯಿಂದ ಹೊರಗಿನ ಅಸಾಧಾರಣ ಕಿಂಡಿ/ಅವಕಾಶ**

**ಅನಿಲ್ ಸಿಂಗ್**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) 2005ರ ಅಡಿಯಲ್ಲಿ ಶಿಕ್ಷಣದ ಗುರಿಯನ್ನೊಳಗೊಂಡ ನ್ಯಾಷನಲ್ ಫೋಕಸ್ ಗ್ರೂಪ್ ಪೊಸಿಷನ್ ಪೇಪರ್ ಸ್ಪಷ್ಟವಾಗಿ ಹೇಳಿರುವುದು ಏನೆಂದರೆ, 'ಶಾಲಾ ವ್ಯವಸ್ಥೆಯು ಬದಲಾಯಿಸಲಾಗದ ರೀತಿಯಲ್ಲಿ ನಿರೂಪಿಸಲ್ಪಟ್ಟಿದ್ದು, ತನ್ನ ತಾಜಾತನವನ್ನು ಉಸಿರಾಡಲು ಕಷ್ಟಪಡುತ್ತಿರುವಂತಿದೆ' ಎಂದು. 'ಮಕ್ಕಳಿಗೆ ಕಲಿಕೆ ಎಂಬುದು, ಅವರ ಮುಂದಿನ ಬದುಕಿಗೆ ಜೈವಿಕ ಅಥವಾ ಜೀವನಾಧಾರದ ನೆಲೆಯಲ್ಲಿ ಸಂಬಂಧಪಡದ ರೀತಿಯಲ್ಲಿ, ಪ್ರತ್ಯೇಕಿಸಲ್ಪಟ್ಟ ಮತ್ತು ಕಾಟಾಚಾರದ ಕ್ರಿಯೆಯಾದಂತೆ ಭಾಸವಾಗುತ್ತಿದೆ' ಎಂದೂ ಫೋಕಸ್ ಗ್ರೂಪ್ ಒಪ್ಪಿಕೊಂಡಿದೆ.

ಶಾಲೆಯು ಶಕ್ತಿ ಮತ್ತು ಪ್ರಾಧಿಕಾರದ ಕೇಂದ್ರವಾಗಿದೆ, ಶಿಕ್ಷಕರು ಅದರ ಪ್ರತಿನಿಧಿಗಳಲ್ಲೊಬ್ಬರಾಗಿದ್ದು, ಇದನ್ನು ಪಠ್ಯಪುಸ್ತಕದ ಮೂಲಕ ಸಾಧಿಸಲು ಯತ್ನಿಸುತ್ತಾರೆ ಎಂಬುದನ್ನು ನಮ್ಮ ಅನುಭವ ತೋರಿಸುತ್ತದೆ. ತರಗತಿಕೋಣೆಯಲ್ಲಿ ಅದು ಚೆನ್ನಾಗಿ ನಡೆಯುತ್ತದೆ ಹಾಗೂ ಈ ರೀತಿಯ ಕೇಂದ್ರೀಕೃತ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳ ಜ್ಞಾನಶಾಸ್ತ್ರೀಯ ಪರಿಶ್ರಮವು (ಶ್ರದ್ಧೆ) ವಿರಳವಾಗಿ ಬಳಕೆಯಾಗುತ್ತದೆ. ಇದೇ ಕಾರಣದಿಂದ, ಪ್ರಶ್ನೆಗಳಿಗೆ ಪೂರ್ವ-ನಿರ್ಧರಿತ ಉತ್ತರಗಳು, ಗ್ರಾಂಥಿಕ ಪದಗಳು ಮತ್ತು ಉದಾಹರಣೆಗಳು, ಅಪ್ರಸ್ತುತ ತರ್ಕಗಳು ಮತ್ತು ಮೂಲಭೂತ ಅಂಶಗಳು, ಏಕತಾನತೆಯ ವಿಶ್ಲೇಷಣೆ ಮತ್ತು ಬದುಕಿಗೆ ಸಂಬಂಧಪಡದ ಅನುಭವಗಳನ್ನು ನಾವು ನೋಡುತ್ತೇವೆ. ಆದ್ದರಿಂದ, ಬೋಧನೆಯ ವಿಧಾನಗಳು ಮತ್ತು ದೃಷ್ಟಿಕೋನಗಳನ್ನು ಹಾಗೂ ಕಲಿಕೆಯನ್ನು ನಿಯಮಿತವಾಗಿ ಪುನರ್ ಪರಿಶೀಲಿಸುತ್ತಿರಬೇಕು.

ತರಗತಿಕೋಣೆಯಿಂದಾಚೆಗಿನ ಜೀವನಕ್ಕೆ ಸಂಬಂಧಿಸಿದಂತೆ ಅಂತಹ ಅನೇಕ ಕ್ರಮಗಳು ಮತ್ತು ವಿಧಾನಗಳಿದ್ದು, ಅವು ಬೋಧನೆ ಹಾಗೂ ಕಲಿಕೆಯನ್ನು ಉಲ್ಲಾಸದಿಂದ ಮತ್ತು ಹುರುಪಿನಿಂದ ಕೂಡಿರುವಂತೆ ಮಾಡುವುದಲ್ಲದೆ, ಆ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳ ಜ್ಞಾನಶಾಸ್ತ್ರೀಯ ಶ್ರದ್ಧೆಯ ಅನೇಕ ಅಂಶಗಳನ್ನು ಒಳಗೊಳ್ಳುತ್ತವೆ. ಅಂತಹ ಒಂದು ವಿಧಾನವಾದ 'ಗೋಡೆ ಪತ್ರಿಕೆ'ಯ ಬಗ್ಗೆ ಈ ಲೇಖನ ವಿವರಿಸುತ್ತದೆ.

ಗೋಡೆ ಪತ್ರಿಕೆಯು ಪಠ್ಯಕ್ರಮದ ಹೊರಗಿನ ಸಂಗತಿಗಳನ್ನು ಒಳಗೊಳ್ಳುವ ಕಾರಣ ಅದನ್ನು ಸಾಮಾನ್ಯವಾಗಿ ಪಠ್ಯೇತರ ಚಟುವಟಿಕೆಯಾಗಿ ಪರಿಗಣಿಸಲಾಗುತ್ತದೆ; ಈ ಚಟುವಟಿಕೆಯನ್ನು ತರಗತಿಕೋಣೆಯಿಂದ ಹೊರಗೆ ನಡೆಸಲಾಗುತ್ತದೆ. ಶಿಕ್ಷಕರ ಮೇಲ್ವಿಚಾರಣೆ ಮತ್ತು ಹತೋಟಿ ಇಲ್ಲದೆಯೇ ಇದನ್ನು ಮಾಡಲು ಸಾಧ್ಯವಾಗಿದ್ದು, ಅದಕ್ಕೆ ಸ್ಪಷ್ಟವಾದ ಶೈಲಿ/ ವಿಧಾನ ಇರುವುದಿಲ್ಲ ಹಾಗೂ ಕಲಿಕಾರ್ಥಿಕಗಳು ಏಕತಾನವಾಗಿ ಅದನ್ನು ಮಾಡುತ್ತಿರುತ್ತಾರೆ. ಬಹಳಷ್ಟು ಸಲ ಅದು ಚಿತ್ರಕಲೆ ಮತ್ತು ಕುಶಲಕಲೆ ತರಗತಿಯಾಗಿ ಮಾರ್ಪಡುವುದೂ ಉಂಟು. ಆದರೆ ಅದರ ಉದ್ದೇಶದಿಂದ ವಿಚಲಿತವಾಗದಿದ್ದಲ್ಲಿ ಅದರಿಂದ ಯಾವುದೇ ಸಮಸ್ಯೆ ಇರುವುದಿಲ್ಲ. ವಿಸ್ಮಯವೇನೆಂದರೆ, ಅದು ಯಕಃಶ್ಚಿತ್ ಅಕಾಡೆಮಿಕೇತರ ಶೈಲಿಯಲ್ಲಿರುವುದೇ ಅದರ ಶಕ್ತಿ. ಹಾಗಿದ್ದರೆ ನಾವು ಅದರ ಶಕ್ತಿಯನ್ನು ಅನುಕ್ರಮವಾಗಿ ನೋಡೋಣ ಬನ್ನಿ.

ಶಿಕ್ಷಣದ ಗುರಿಗೆ ಸಂಬಂಧಿಸಿದಂತೆ ಎನ್‌ಸಿಎಫ್ 2005 ಹೇಳುವಂತೆ, ಕಲಿಕಾರ್ಥಿಗೆ ಹೊಸದನ್ನು ಅನ್ವೇಷಿಸಲು ಉತ್ತೇಜನ ಸಿಗದೇ ಹೋದರೆ ಬೋಧನೆ-ಕಲಿಕೆ ಪ್ರಕ್ರಿಯೆಯೇ ನಿರರ್ಥಕ. ನಾವು ಈ ದೃಷ್ಟಿಕೋನದೊಂದಿಗೆ ಗೋಡೆ ಪತ್ರಿಕೆಯನ್ನು ಪರಿಗಣಿಸಿದರೆ, ಮಕ್ಕಳು ಆ ಮೂಲಕ ಹೊಸದರ ಅನ್ವೇಷಣೆಗೆ ಪ್ರಚೋದನೆ ಪಡೆಯುವುದರ ಜೊತೆಗೆ, ತರಗತಿಕೋಣೆಯಾಚೆಗಿನ ಪ್ರಪಂಚವನ್ನು ಗುರುತಿಸಿ, ಕಲಿಕೆಯ ಅಖಾಡವಾಗಿಸಿಕೊಳ್ಳುತ್ತಾರೆ, ಹುಡುಕಾಟಕ್ಕೆ ಪ್ರೇರೇಪಿಸುತ್ತದೆ, ಆಯ್ದ ವಿಷಯದ ಬಗ್ಗೆ ಮಾಹಿತಿ

ಕಲೆಹಾಕುತ್ತಾರೆ, ಪಠ್ಯಪುಸ್ತಕಗಳ ಹೊರತಾದ ಸಾಮಗ್ರಿಗಳನ್ನು ನೋಡುತ್ತಾರೆ, ತಮ್ಮದೇ ಬದುಕಿನ ಅನುಭವಗಳಿಗೆ ಆಕಾರ ನೀಡುತ್ತಾರೆ ಹಾಗೂ ತಮ್ಮ ಕಲ್ಪನಾಶಕ್ತಿಗೆ ರೆಕ್ಕೆ ಕಟ್ಟುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಇವೆಲ್ಲವೂ ಅವರದೇ ಇಚ್ಛೆ, ಹಾರೈಕೆ ಮತ್ತು ಉಪಕ್ರಮಗಳಾಗಿರುತ್ತವೆ. ಈ ಚಟುವಟಿಕೆಯು ಪಠ್ಯಪುಸ್ತಕದಾಚೆ ವಿಷಯಗಳನ್ನು ಗ್ರಹಿಸುವಲ್ಲಿಂದ ಶುರುವಾಗಿ, ಅದನ್ನು ಪರೀಕ್ಷಿಸಿ, ಸೃಜನಶೀಲತೆಗೆ ನಿಜ ಅರ್ಥದಲ್ಲಿ ಉತ್ತೇಜನ ಕೊಡುವ ಸರಣಿ ಕೆಲಸಗಳ ಮೂಲಕ ಮುಂದುವರಿಯುತ್ತದೆ. ಆನಂದ್ ನಿಕೇತನ್ ಡೆಮಾಕ್ರಟಿಕ್ ಸ್ಕೂಲ್‌ನಲ್ಲಿ (ಆನಂದ್ ನಿಕೇತನ್ ಪ್ರಜಾಸತ್ತಾತ್ಮಕ ಶಾಲೆ) ಸ್ವಾತಂತ್ರ್ಯ ಎಂಬ ವಿಷಯವನ್ನು ಕುರಿತು ಗೋಡೆ ಪತ್ರಿಕೆ ಸಿದ್ಧಪಡಿಸುವ ಸಮಯದಲ್ಲಿ, ಪುಸ್ತಕದಲ್ಲಿ ಕೊಟ್ಟಿರುವಂತೆ, ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಿದ, ಸೀಮಿತ ಆಯಾಮದಲ್ಲಿ ಮಕ್ಕಳು ಯೋಚಿಸಲಿಲ್ಲ. ಬದಲಿಗೆ, ಅವರು ಅದರಿಂದಾಚೆಗಿನ ವಿಭಿನ್ನ ಆಯಾಮಗಳಲ್ಲಿ ಸ್ವಾತಂತ್ರ್ಯವನ್ನು ಪರಿಗಣಿಸಿದರು. ಅವರಲ್ಲಿ ಪ್ರತಿಯೊಬ್ಬರೂ ಸ್ವಾತಂತ್ರ್ಯಕ್ಕೆ ಬೇರೆ ಬೇರೆ ಅರ್ಥವನ್ನು ಹೊಂದಿದ್ದರು. ಸೆರೆಯಲ್ಲಿರುವ ಪ್ರಾಣಿಗಳು ಮತ್ತು ಅವುಗಳ ಬಿಡುಗಡೆ/ಸ್ವಾತಂತ್ರ್ಯದ ಬಗ್ಗೆಯೂ ಅವರು ಆಲೋಚಿಸಿದ್ದರು. ಸ್ವಾತಂತ್ರ್ಯವನ್ನು ಕುರಿತು ಪುಸ್ತಕದಿಂದ ಯಾವುದೋ ಒಂದು ಪದ್ಯವನ್ನು ಆರಿಸಿಕೊಳ್ಳುವ ಬದಲು ಅವರು ಹೊಸ ಪದ್ಯವನ್ನು ಸ್ವತಃ ಬರೆದರು. ಅಷ್ಟೇ ಅಲ್ಲ, ವಿದ್ಯಾರ್ಥಿಗಳು ತಮ್ಮ ಶಿಕ್ಷಕರು, ಸ್ನೇಹಿತರು, ಮನೆ ಮಂದಿಯ ಬಳಿ, ಸ್ವಾತಂತ್ರ್ಯವನ್ನು ಅವರು ಅರ್ಥೈಸಿಕೊಂಡ ಬಗೆ ಏನು ಎಂದು ಕೇಳಿ ತಿಳಿದುಕೊಂಡರು. ಇಷ್ಟಾದ ಮೇಲೆ ಅಂತಿಮವಾಗಿ ಅವರು ಗೋಡೆ ಪತ್ರಿಕೆಯನ್ನು ಸಿದ್ಧಪಡಿಸಿದರು.

ಗೋಡೆಪತ್ರಿಕೆಯು ಅವರಿಗೆ ಒಂದೆಡೆ ಸೃಜನಶೀಲತೆಗೆ ಬಾಗಿಲು ತೆರೆದರೆ, ಮತ್ತೊಂದೆಡೆ, ಜೀವನದ ಬೇರೆ ಕೌಶಲಗಳನ್ನು ಕಲಿಯುವ ಅವಕಾಶವನ್ನೂ ತೆರೆದುಕೊಟ್ಟಿತು. ಶಿಕ್ಷಣ ಅಥವಾ ಪಾಠಗಳ ವಿಶಾಲವಾದ ಅಂಶಗಳನ್ನು ಕುರಿತು ನಾವು ಮಾತನಾಡುವುದಾದರೆ, ಈ ಜೀವನ ಕೌಶಲಗಳು ಬಹು ಮುಖ್ಯವಾಗುತ್ತವೆ. ಗೋಡೆಪತ್ರಿಕೆ ಸಿದ್ಧಪಡಿಸುವ ಕೆಲಸ ನಿರ್ವಹಿಸುವಾಗ, ಮಕ್ಕಳು ತಂಡವಾಗಿ ಕಾರ್ಯ ನಿರ್ವಹಿಸುವ ವೇಳೆ ಆ ತಂಡದಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಳ್ಳುವುದು, ತಾರ್ಕಿಕವಾಗಿ ವಾದಿಸುವುದು, ಯೋಗ್ಯ ಸಾಮಗ್ರಿಗಳನ್ನು ಆರಿಸಿಕೊಳ್ಳುವುದು, ಪರಸ್ಪರರ ಅಭಿಪ್ರಾಯಗಳನ್ನು ಗೌರವಿಸುವುದು ಮತ್ತು ಸಹಭಾಗಿತ್ವವನ್ನು ಬೆಳೆಸುವುದನ್ನು ಕಲಿಯುತ್ತಾರೆ. ಇವೆಲ್ಲವನ್ನೂ ಅವರು ಯಾರಿಂದಲೂ ಹೇಳಿಸಿಕೊಳ್ಳದೆ, ಜೈವಿಕವಾಗಿ ಅಥವಾ ಸ್ವಾಭಾವಿಕವಾಗಿ ಕಲಿಯುತ್ತಾರೆ. ಅವರ ಆ ಒಂದು ಸಣ್ಣ ಗುಂಪು ಪರಿಪೂರ್ಣ ಸಮಾಜವಾಗಿಯೂ, ಸಾಮಾಜಿಕ ಮಾರ್ಗಗಳು ಅದರ ಆವಶ್ಯಕತೆಗಳಾಗಿಬಿಡುತ್ತವೆ. ಅವರ ಮುಂದಿರುವ ಗುರಿ ಒಂದೇ- ಗೋಡೆ ಪತ್ರಿಕೆಯನ್ನು ಉತ್ತಮವಾಗಿ ಹೊರತರುವುದು.

***///// ಚಿತ್ರ////***

ಶಾಲೆಗಳಿಗೆ ಬೋಧನೆ, ವಾಚನ ಮತ್ತು ಬರವಣಿಗೆ ಕುರಿತು ಸಾಕಷ್ಟು ಕಾಳಜಿ ಇದ್ದು, ಆ ಗುರಿ ತಲಪಲು ಮಹತ್ತರ ಕೆಲಸಗಳನ್ನು ಅವು ಮಾಡುತ್ತವೆ. ಆದರೆ ಈ ಮಧ್ಯೆ, ಬರೆಯುವ ಮತ್ತು ಓದುವ ಶಕ್ತಿಯನ್ನು, ಅದರ ಚೈತನ್ಯ ಮತ್ತು ಅರ್ಥಪೂರ್ಣತೆಯನ್ನು ತುಂಬುವ ಮತ್ತು ನಿರ್ವಹಿಸುವ ಬಗೆ ಹೇಗೆ ಎಂಬುದು ಗಮನಿಸದೇ ಇರುವ ಸಂಗತಿಯಾಗಿದೆ. ಓದುವುದು ಮತ್ತು ಬರೆಯುವುದು ಸಾಧಾರಣ ಸಾಧನೆಗಿಂತ ಮಿಗಿಲಾಗಿ, ನಿರ್ದಿಷ್ಟವಾದ ಯಾವುದನ್ನೋ ಸಾಧಿಸಲು ಸ್ಫೂರ್ತಿ ಆಗುವುದಾದರೆ, ಆಗ ಅದು ಮೋಜು ಮತ್ತು ಅರ್ಥಪೂರ್ಣವೂ ಆಗಿರುತ್ತದೆ. ಅಂತಹ ಸನ್ನಿವೇಶದಲ್ಲಿ, ಗೋಡೆಪತ್ರಿಕೆ ಮಾಡುವ ಲಕ್ಷ್ಯ/ಗುರಿಯೂ ಆಕರ್ಷಕ, ಆಸಕ್ತಿದಾಯಕ ಮತ್ತು ಪ್ರತಿಯೊಬ್ಬರ ಆಸಕ್ತಿಯ ಕೇಂದ್ರ ಹಾಗೂ ಅದರ ಚೈತನ್ಯವೂ ಆಗುತ್ತದೆ. ತರಗತಿಕೋಣೆಯಲ್ಲಿ ನಡೆಯುವ ಎಂದಿನ ಬರವಣಿಗೆಯಲ್ಲಿ ಜೀವಂತಿಕೆ ಅಥವಾ ಚೈತನ್ಯ ಇರುವುದಿಲ್ಲ. ಯಾಕೆಂದರೆ ಮಗು ಗ್ರಾಂಥಿಕ ಪ್ರಶ್ನೆಗಳು ಮತ್ತು ಉತ್ತರಗಳನ್ನು ಬರೆಯುತ್ತದೆ. ಅದನ್ನು ಆಕರ್ಷಣೀಯವಾಗಿಸುವ, ಓದಿಸಿಕೊಂಡು ಹೋಗಬಲ್ಲ ಮತ್ತು ಎಲ್ಲರ ಆಸಕ್ತಿಯ ಕೇಂದ್ರಬಿಂದುವಾಗುವಂತಹ ಅಂಶವೇ ಅಲ್ಲಿ ಇರುವುದಿಲ್ಲ. ಶಿಕ್ಷಣದ ವಿಶಾಲವಾದ

ಧ್ಯೇಯಗಳ ನೆಲೆಯಲ್ಲಿ ಕೌಶಲಗಳನ್ನು ಕುರಿತು ಮಾತನಾಡುವಾಗ, ಸಮುದಾಯದ ಆಸೆ ಮತ್ತು ಆಕಾಂಕ್ಷೆಗಳಿಗೆ ಸಂಬಂಧಿಸಿದ ಕೌಶಲಗಳನ್ನು ಕುರಿತೂ ಮಾತನಾಡುತ್ತೇವೆ. ಅದನ್ನು ನಾವು ಸುಂದರ/ಸೌಂದರ್ಯದ ಕೌಶಲವಾಗಿ ವಿಶಾಲ ಅರ್ಥದಲ್ಲಿ ನೋಡುತ್ತೇವೆ. ಗೋಡೆ ಪತ್ರಿಕೆಯಲ್ಲಿ ಬರೆಯುವಾಗ, ಅದರ ಅಲಂಕಾರ ಮತ್ತು ಪ್ರಸ್ತುತಿಯು ಈ ಸೌಂದರ್ಯದ ಕೌಶಲವನ್ನು ಇನ್ನಷ್ಟು ಪೋಷಿಸುತ್ತದೆ.

ಯಾವುದು ವಿಮೋಚನೆ ನೀಡುವುದೋ ಅದುವೇ ಶಿಕ್ಷಣ. ಇದನ್ನು ಬೇರೆ ಬೇರೆ ನೆಲೆಗಳಲ್ಲಿ ವ್ಯಕ್ತಪಡಿಸಲಾಗಿದೆ. ಜೆ.ಕೃಷ್ಣಮೂರ್ತಿ, ಗಾಂಧಿ, ಟ್ಯಾಗೋರ್, ಅಂಬೇಡ್ಕರ್, ಫುಲೆ ಮತ್ತು ಪೌಲೊ ಫ್ರೈರೆ ಅವರೂ ವಿಮೋಚನೆ ಬಗ್ಗೆ ವಿವಿಧ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಸ್ವತಂತ್ರ ಚಿಂತನೆ, ಸ್ವಯಂ ಪ್ರೇರಣೆ, ಸ್ವಾಭಾವಿಕ ರಚನೆ ಮತ್ತು ಮುಕ್ತ ಅಭಿವ್ಯಕ್ತಿಯ ಮೂಲಕ ವಿಮೋಚನೆಯ ಪಥವನ್ನು ಕಾಣಬಹುದು ಅಲ್ಲದೆ, ಶಿಕ್ಷಣದ ಸಂದರ್ಭದಲ್ಲಿ ಅದು ಸಂಪೂರ್ಣ ಸತ್ಯ. ನಮ್ಮ ಶೈಕ್ಷಣಿಕ ಸಾಕ್ಷ್ಯಗಳೂ ಇದನ್ನು ವಾದಿಸುತ್ತದೆ. ತರಗತಿಯ ಒಳಗೆ ಶಿಕ್ಷಕರ ಯೋಚನೆಗಳು, ಅವರ ಉಪಸ್ಥಿತಿ, ಅವರ ಕ್ರಮಾನುಸರಣೆ ಮತ್ತು ರೂಢಿಯಲ್ಲಿರುವ ಊಹೆಗಳು ತರಗತಿಕೋಣೆಯ ಒಟ್ಟಾರೆ ನೋಟವನ್ನೇ ಬದಲಾಯಿಸಿಬಿಡುವ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯದ ಸಾಧ್ಯತೆ ತರಗತಿಕೋಣೆಯ ಹೊರಗೇ ಅಧಿಕ. ಎಲ್ಲ ಗಮನವೂ ಪಠ್ಯಕ್ರಮ ಸಂಬಂಧಿ ಮಾಹಿತಿ ವಿನಿಮಯಕ್ಕೇ ಮೀಸಲು. ಗೋಡೆಪತ್ರಿಕೆ ತಯಾರಿಯು ಶಿಕ್ಷಕರ ಪ್ರಭಾವ ಮತ್ತು ಹತೋಟಿಯಿಂದ ಬಿಡುಗಡೆ ಕೊಡಿಸುವ ದಾರಿಯನ್ನು ತೆರೆದುಕೊಡುತ್ತದೆ, ಸ್ವತಂತ್ರ ಚಿಂತನೆ, ರಚನೆ ಮತ್ತು ಅಭಿವ್ಯಕ್ತಿಯ ದಾರಿಯನ್ನೂ ತೆರೆಯುತ್ತದೆ.

***// ಚಿತ್ರ//***

ಗೋಡೆಪತ್ರಿಕೆ ತಯಾರಿಯ ಘಟನಾವಳಿಯು ಯಾವುದೇ ಪ್ರಶ್ನೆಗೆ ಬರೆದ ಉತ್ತರವೂ ಅಲ್ಲ, ಹಿಂದಿ ವ್ಯಾಕರಣದಲ್ಲಿನ *ರಸ* ಅಥವಾ *ಭಾವದ* ಯಾವುದೇ ಉದಾಹರಣೆಗಾಗಿ ಬರೆದ ಪದ್ಯವೂ ಅಲ್ಲ. ಬದಲಿಗೆ, ಅದು ಸ್ವಾಭಾವಿಕವಾಗಿ, ಅಸ್ಖಲಿತವಾಗಿ ಹೊರಹೊಮ್ಮಿದ ಅಸಲಿ ರಚನೆ. ಗೋಡೆಪತ್ರಿಕೆಗೆ ಬರೆಯುವುದು ಅಥವಾ ಚಿತ್ರ ಬಿಡಿಸುವುದು ಸ್ವಾಭಾವಿಕವಾಗಿ, ಯಾವುದೇ ಒತ್ತಡವಿಲ್ಲದೆ ನಡೆಯುತ್ತದೆ. ಅಂತಹ ಸಂಯೋಜನೆಯು ಶಿಕ್ಷಣದ ನಿಜವಾದ ಧ್ಯೇಯವನ್ನು ಈಡೇರಿಸುತ್ತದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕುತ್ತಿರುವ ನಾವು, ಮಕ್ಕಳ ಆತ್ಮವಿಶ್ವಾಸ ಮತ್ತು ಕಾರ್ಯರೂಪದ ಅರ್ಥೈಸುವಿಕೆ ಬಗ್ಗೆ ಮಾತನಾಡುತ್ತೇವೆ. ಶಿಕ್ಷಣವು ಸಮಾಜದ ಇಂತಹ ಆಕಾಂಕ್ಷೆಗಳನ್ನು ಈಡೇರಿಸಬೇಕಾಗುತ್ತದೆ. ಎನ್‌ಸಿಎಫ್ 2005 ಕೂಡಾ, ಈ ಬಗ್ಗೆ ಚರ್ಚಿಸಿದ್ದು, ಮಕ್ಕಳನ್ನು ಉತ್ತಮ ನಾಗರಿಕನ್ನಾಗಿ ರೂಪಿಸುವಲ್ಲಿ ಶಿಕ್ಷಣದ ಕೊಡುಗೆ ಮಹತ್ತ್ವದ್ದು ಎಂದು ಒತ್ತಿಹೇಳಿದೆ. ಬೋಧನೆ ಮತ್ತು ಕಲಿಕೆಯ ವಿಕೇಂದ್ರೀಕರಣ, ಮಕ್ಕಳ ತಿಳಿವಳಿಕೆ, ಬುದ್ಧಿಶಕ್ತಿಯ ಮೇಲೆ ನಂಬಿಕೆ ಇರಿಸುವ ಜೊತೆಗೆ, ತರಗತಿಕೋಣೆಯ ಮೇಲ್ಮೆಯ ಭಾವದಿಂದ ಹೊರಬಂದರೆ ಇದು ಸಾಧ್ಯ. ಚಟುವಟಿಕೆಗಳು ಹಾಗೂ ಯೋಜನೆ ತಯಾರಿಯು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ, ಪ್ರಾಯೋಗಿಕ ತಿಳಿವಳಿಕೆಯನ್ನು ಸಾಧ್ಯವಾಗಿಸುತ್ತದೆ. ತರಗತಿಕೋಣೆಯಲ್ಲಿ ಶಿಕ್ಷಕರು ನೀಡುವ ಏಕಮುಖ ಉಪನ್ಯಾಸ/ ಪ್ರವಚನಗಳಿಂದ ಸಾಧ್ಯವಾಗದು. ಹಾಗಾಗಿ, ಖುದ್ದಾಗಿ ಕೈಗಳಿಂದ ಮಾಡುವ ಬೇರೆ ಬೇರೆ ಕೆಲಸಗಳು, ಯೋಜನೆ ತಯಾರಿ, ಜವಾಬ್ದಾರಿಗಳ ಹಂಚಿಕೆ, ದಕ್ಷತೆಯ ಗುರುತಿಸುವಿಕೆ ಮತ್ತು ಯೋಜನೆಯ ಅನುಷ್ಠಾನವನ್ನೊಳಗೊಂಡ ಗೋಡೆಪತ್ರಿಕೆಯು ಸೂಕ್ತ ಯೋಜನೆಯಾಗಿದೆ.

ಗೋಡೆಪತ್ರಿಕೆಗೆ ಸಂಬಂಧಿಸಿದ ಚಟುವಟಿಕೆಗಳು/ ಸಾಮಗ್ರಿಗಳು ಅಥವಾ ವಸ್ತುಗಳ ಮೂಲಕ ವಿದ್ಯಾರ್ಥಿಗಳಿಗೆ ಸ್ಥಳೀಯ ಪರಿಸ್ಥಿತಿಗಳನ್ನೂ, ಪಠ್ಯಕ್ರಮದಲ್ಲಿನ ಸಾಂಸ್ಕೃತಿಕ ಪರಿಸ್ಥಿತಿಗಳನ್ನೂ ಒಟ್ಟುಗೂಡಿಸಲು ಅವಕಾಶವಾಗುತ್ತದೆ. ಮಕ್ಕಳು ತಮ್ಮ ಬದುಕಿನ ಅನುಭವಗಳು, ಪದ್ಧತಿಗಳು ಮತ್ತು ನಂಬಿಕೆಗಳಿಗೆ ಜಾಗ ಕೊಟ್ಟು, ಪರಸ್ಪರರ ಕೌಟುಂಬಿಕ ಹಿನ್ನೆಲೆಗಳನ್ನೂ ಅರಿತುಕೊಳ್ಳುತ್ತಾರೆ. ಪಠ್ಯಪುಸ್ತಕದಲ್ಲಿ

ನೀಡಲಾಗಿರುವ ವಿಷಯವನ್ನೇ ಇನ್ನಷ್ಟು ವಿವರವಾಗಿ ಅಭಿವೃದ್ಧಿಪಡಿಸಿ ಗೋಡೆಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಆದರೆ ವಸ್ತು/ ವಿಷಯಗಳಿಗೆ ಹೊಸ ಆಯಾಮಗಳನ್ನು ನೀಡಲಾಗುತ್ತದೆ. ಎನ್‌ಸಿಇಆರ್‌ಟಿಯ ಮೂರನೇ ತರಗತಿಯ ಪಠ್ಯದಲ್ಲಿರುವ 'ಮನ್ ಕರ್‌ತಾ ಹೈ' ಎಂಬ ಹಿಂದಿ ಪದ್ಯವು ಇದಕ್ಕೊಂದು ನಿದರ್ಶನ. ಮಕ್ಕಳು ಅದೇ ಶೀರ್ಷಿಕೆಯೊಂದಿಗೆ ಗೋಡೆಪತ್ರಿಕೆ ಸಿದ್ಧಪಡಿಸಿದರು. ಅದೇ ಗೋಡೆಪತ್ರಿಕೆಯು ಮುಂದಕ್ಕೆ ಶಿಕ್ಷಕರಿಗೆ ಆಕರ ಮತ್ತು ಪಠ್ಯ ಸಾಮಗ್ರಿಯಾಯಿತು! ಪಠ್ಯಪುಸ್ತಕದಲ್ಲಿ ಬಿಟ್ಟುಹೋದ ಯಾವುದಾದರೂ ವಿಷಯಗಳ ಚರ್ಚೆಯನ್ನು ತರಗತಿಯ ಹೊರಗೆ, ಗೋಡೆಪತ್ರಿಕೆಯ ಮೂಲಕ ವಿವರವಾಗಿ ಚರ್ಚಿಸಿ, ಪಠ್ಯದ ವಿಷಯವನ್ನು ಇನ್ನಷ್ಟು ಶ್ರೀಮಂತಗೊಳಿಸಬಹುದು.

ಗೋಡೆಪತ್ರಿಕೆಯ ನೆರವಿನೊಂದಿಗೆ ಪಠ್ಯಪುಸ್ತಕವು ಶಕ್ತಿಶಾಲಿ ಸಾಕ್ಷ್ಯವಾಗುತ್ತದೆ. ಅದರ ಪ್ರತಿಯೊಂದು ಪಾಠವೂ ಮಕ್ಕಳ ಜೀವನದ ಎಳೆಯೊಂದಿಗೆ, ಅವರ ಅನುಭವಗಳೊಂದಿಗೆ, ಆಕಾಂಕ್ಷೆಗಳೊಂದಿಗೆ ಮತ್ತು ದೃಷ್ಟಿಕೋನಗಳೊಂದಿಗೆ ಮುನ್ನಡೆಸುತ್ತದೆ. ಹಾಗೆ ಅಭಿವೃದ್ಧಿಪಡಿಸಿದ ಗೋಡೆಪತ್ರಿಕೆಗಳು, ತರಗತಿಕೋಣೆಯಿಂದ ಹೊರಗೆ ಹೊಸ ಪ್ರಪಂಚವನ್ನೇ ಸೃಷ್ಟಿಸಬಲ್ಲವು. ಆ ಮೂಲಕ ಪಠ್ಯದ ಧ್ಯೇಯದೊಂದಿಗೆ ಶಿಕ್ಷಣದ ವಿಶಾಲ ಗುರಿಯನ್ನೂ ತಲಪಬಹುದು. ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಗಳು ಇದರ ಪ್ರಾಮುಖ್ಯವನ್ನು ಅರಿತು, ಬೋಧನೆ-ಕಲಿಕೆಗೆ ಸರ್ವಾಂಗೀಣ ವಿಧಾನವಾಗಿ ಸ್ವೀಕರಿಸಿ, ಅದನ್ನು ಸಿದ್ಧಪಡಿಸಲು ಮಕ್ಕಳಿಗೆ ಸ್ವಾಯತ್ತತೆ ನೀಡಬೇಕು. ಶಿಕ್ಷಕರ ಹತೋಟಿಯಲ್ಲಿಲ್ಲದೇ ಇರುವುದೇ ಗೋಡೆಪತ್ರಿಕೆಯ ಸೌಂದರ್ಯ.

ಅನಿಲ್ ಸಿಂಗ್ ಅವರು ಕಳೆದ 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ, ವಿಶೇಷವಾಗಿ ಶಾಲಾ ಶಿಕ್ಷಣದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ. ಹಿಂದಿ ಭಾಷಾ ಬೋಧನೆಯೊಂದಿಗೆ, ವಿದ್ಯಾರ್ಥಿಗಳಿಗೆ ಪ್ರತಿದಿನವೂ ರಂಗಭೂಮಿ ಚಟುವಟಿಕೆಗಳನ್ನು ಹೇಳಿಕೊಡುತ್ತಾರೆ. ಕತೆ ಹೇಳುವುದು ಅವರಿಗೆ ಅಚ್ಚುಮೆಚ್ಚು. ತರಗತಿಕೋಣೆಯಲ್ಲಿನ ತಮ್ಮ ಅನುಭವಗಳು ಮತ್ತು ಶಿಕ್ಷಣ ಸಂಬಂಧಿ ಇತರ ವಿಷಯಗಳನ್ನು ಕುರಿತ ಅನಿಲ್ ಅವರ ಲೇಖನಗಳು ನಿಯಮಿತವಾಗಿ ಪ್ರಕಟವಾಗುತ್ತಿರುತ್ತವೆ. ಪ್ರಸ್ತುತ, ಭೋಪಾಲದ ಆನಂದ್ ನಿಕೇತನ್ ಡೆಮಾಕ್ರಟಿಕ್ ಸ್ಕೂಲ್‌ನಲ್ಲಿ ಅವರು ಪರ್ಯಾಯ ಶಿಕ್ಷಣದ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅವರ ಸಂಪರ್ಕಕ್ಕೆ:

bihuanandanil@gmail.com